# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಒನ್ ಸ್ಟಾಪ್ ಸೆಂಟರ್(ಸಖಿ) ಕೇಂದ್ರಗಳಲ್ಲಿ ಸಿಬ್ಬಂದಿ ಸೃಜನೆ ಕುರಿತು.

ಓದಲಾಗಿದೆ: ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಏಕ ಕಡತ ಪ್ರಸ್ತಾವನೆ ಸಂ:ಮಮಅಇ:ಮಕವಿ:ಒ.ಎಸ್.ಸಿ.06:2015-16 ದಿನಾಂಕ: 05-07-2019.

**ಪ್ರಸ್ತಾವನೆ:-**

ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಸೇವೆ, ಪೊಲೀಸ್ ಸೇವೆ, ಕಾನೂನು ಸೇವೆ, ಸಮಾಲೋಚನೆ ಮತ್ತು ತಾತ್ಕಾಲಿಕ ವಸತಿ ಒದಗಿಸುವ ಕೇಂದ್ರ ಸರ್ಕಾರದ ಒನ್ ಸ್ಟಾಪ್ ಸೆಂಟರ್ ಯೋಜನೆಯಡಿ ರಾಜ್ಯದಲ್ಲಿ ಎಲ್ಲಾ 30 ಜಿಲ್ಲೆಗಳಲ್ಲಿ ಒನ್ ಸ್ಟಾಪ್ ಸೆಂಟರ್-ಸಖಿ ಕೇಂದ್ರಗಳನ್ನು ಪ್ರಾರಂಭಿಸಲು 2015-16ನೇ ಸಾಲಿನಿಂದ ಹಂತಹಂತವಾಗಿ ಮಂಜೂರಾತಿ ನೀಡಿರುತ್ತದೆ. ಒನ್ ಸ್ಟಾಪ್ ಸೆಂಟರ್-ಸಖಿ ಕೇಂದ್ರಗಳನ್ನು ಸ್ಥಾಪಿಸಲು ಕಟ್ಟಡ ನಿರ್ಮಾಣಕ್ಕಾಗಿ ಮತ್ತು ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಮಾಡಿರುತ್ತದೆ. **ಈ ಯೋಜನೆಯಡಿ ಕೇಂದ್ರ ಸರ್ಕಾರವು ಶೇ.100 ರಷ್ಟು ಅನುದಾನ ಬಿಡುಗಡೆ ಮಾಡುವುದರಿಂದ ರಾಜ್ಯ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಇರುವುದಿಲ್ಲ.**

ಒನ್ ಸ್ಟಾಪ್ ಸೆಂಟರ್-ಸಖಿ ಕೇಂದ್ರಗಳು 24*7ರಂತೆ ಕಾರ್ಯ ನಿರ್ವಹಿಸಲು ಅನುವಾಗುವಂತೆ ಸಿಬ್ಬಂದಿಗಳನ್ನು ಪ್ರತಿ ಮಾಹೆಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನಿಗದಿಪಡಿಸಿರುವ ರೂ.2.00 ಲಕ್ಷಗಳ ಮಿತಿಯಲ್ಲಿ ಗೌರವಧನ ನಿಗದಿಪಡಿಸಿ ನೇಮಿಸಿಕೊಳ್ಳಲು ತಿಳಿಸಿದ್ದು, ಪ್ರತ್ಯೇಕವಾಗಿ ಹುದ್ದೆಗೆ ಅನುಗುಣವಾಗಿ ಗೌರವಧನವನ್ನು ನಿಗದಿಪಡಿಸಿರುವುದಿಲ್ಲ. ಈ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯ ಮಟ್ಟದ ಚಾಲನಾ ಮತ್ತು ಮೇಲ್ವಿಚಾರಣಾ ಸಮಿತಿಯ ದಿನಾಂಕ:4.4.2018ರ ಸಭೆಯಲ್ಲಿ ಚರ್ಚಿಸಲಾಗಿದ್ದು, ಗೆಳತಿ ವಿಶೇಷ ಚಿಕಿತ್ಸಾ ಘಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಮುಂದುವರೆಸಿ ಅವರಿಗೆ ನೀಡುತ್ತಿರುವ ಗೌರವಧನವನ್ನು ಪರಿಗಣಿಸಿ ಒನ್ ಸ್ಟಾಪ್ ಸೆಂಟರ್ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಗೌರವಧನ ನಿಗದಿಪಡಿಸಲು ನಿರ್ಣಯಿಸಲಾಗಿರುತ್ತದೆ.

ಮುಂದುವರೆದು, **ರಾಜ್ಯದ ಎಲ್ಲಾ 30 ಜಿಲ್ಲೆಗಳ ಒನ್ ಸ್ಟಾಪ್ ಸೆಂಟರ್-ಸಖಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ** ಈ ಕೆಳಕಂಡಂತೆ ಅಗತ್ಯವಿರುವ ಕನಿಷ್ಠ ಸಿಬ್ಬಂದಿ ಹುದ್ದೆ ಸೃಜಿಸಿ **ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ** ಜಿಲ್ಲಾ ಸಮಿತಿಯ ಮೂಲಕ ನಿಯಮಾನುಸಾರ ಆಯ್ಕೆ ಮಾಡಿ ಮಾಹೆಯಾನ ರೂ.2.00 ಲಕ್ಷಗಳ ಮಿತಿಯ ವೇತನಕ್ಕೆ ಒಳಪಟ್ಟು ಒಟ್ಟು 13 ಸಿಬ್ಬಂದಿಗಳನ್ನು ಬಾಹ್ಯ ಮೂಲ/ಹೊರಗುತ್ತಿಗೆ ಆಧಾರದ ಮೇಲೆ ಮತ್ತು ಉಳಿದ 4 ಸಿಬ್ಬಂದಿಗಳನ್ನು ನಿಯೋಜನೆ ಮೇಲೆ ನೇಮಿಸಿಕೊಳ್ಳಲು **ಮತ್ತು ಜಿಲ್ಲಾ ಮಟ್ಟದಲ್ಲಿ ಒನ್ ಸ್ಟಾಪ್ ಸೆಂಟರ್-ಸಖಿ ಯೋಜನೆಗೆ ರಾಜ್ಯ ಸರ್ಕಾರದ ಗೆಳತಿ ವಿಶೇಷ ಚಿಕಿತ್ಸಾ ಘಟಕ ಯೋಜನೆಯಡಿ ರಚಿಸಲಾಗಿರುವ ಜಿಲ್ಲಾ ಸಮಿತಿಯನ್ನು ಅಳವಡಿಸಿಕೊಳ್ಳುವ ಕುರಿತು ಅನುಮೋದನೆ ನೀಡುವಂತೆ** ಮೇಲೆ ಓದಲಾದ ಏಕಕಡತ ಪ್ರಸ್ತಾವನೆಯಲ್ಲಿ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸರ್ಕಾರವನ್ನು ಕೋರಿರುತ್ತಾರೆ.

| Sl No | Designation | No.of Staff | Qualification | Proposed Honorarium |
|---|---|---|---|---|
| 1 | Centre Administrator | 1 | MSW/Law Degree /Msc (Home Science)/ MA(Women Studies) | 40,000/- |
| 2 | I T Staff | 1 | BE Graduate / Diploma in computer | 30,000/- |

| | | | | |
|---|---|---|---|---|
| 3 | Counsellor(Psycho-social counseling) | 1 | Post Graduate Degree in Social Work / clinical psychology | 25,000/- |
| 4 | Case Worker/Social Worker | 3 | Law Degree/ MSW/MA (Psychology) | 45,000/- (15000*3) |
| 5 | Paralegal Personnel / Lawyer (outsource / deputation) | 2 | Degree in Law/Social Sciences with Para legal training /Practicing Lawer | 24,000/- (12000*2) |
| 6 | Police Personnel | 1 | On deputation | - |
| 7 | Medical Assistance(Nurses) | 3 | On deputation | - |
| 8 | Multipurpose helper/ cleaner (outsource ) | 3 | Literate with experience of working as a helper | 24,000/- (8000*3) |
| 9 | SecurityGuard/Night Guard | 2 | Person having at least 2 years of experience | 12000 (6000*2) |

ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಮಮಇ 03 ಮಮಅ 2018 (ಭಾ-1) ಬೆಂಗಳೂರು, ದಿನಾಂಕ:02.11.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ 30 ಜಿಲ್ಲೆಗಳ ಒನ್ ಸ್ಟಾಪ್ ಸೆಂಟರ್ ಗಳ ಸಮರ್ಪಕ ನಿರ್ವಹಣೆಗಾಗಿ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದಂತೆ ಪ್ರತಿ ಜಿಲ್ಲೆಗೆ 08 ಹುದ್ದೆಗಳಂತೆ ಒಟ್ಟು 240 ಹುದ್ದೆಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಸೃಜಿಸಿ ಆದೇಶಿಸಿದೆ.

| Sl No | Name of the post | Mode of recruitment | Qualification | No.of Staff | Proposed Honorarium |
|---|---|---|---|---|---|
| 1. | Centre Administrator | Service Contract | MSW/Masters in Law /Msc Home Science(Human Development and Family Relation) / MSC Psychology/ MSC Psychiatry (with 5yrs experience in counseling field) | 01 | 40,000/- |
| 2. | Counsellor (Psycho-social counseling) | | MSW/Msc Home Science(Human Development and Family Relation) / Psychology/ Psychiatry (with 3yrs experience in counseling field) | 01 | 30,000/- |
| 3. | Case Worker/Social Worker | | BSW/ BA (sociology) / Graduate in Women Studies ((with 2yrs experience) | 02 | 50,000/- (25000*2) |
| 4. | Paralegal Personnel / Lawyer | | Degree in Law (with 2-3yrs experience) | 02 | 50,000/- (25000*2) |
| 5. | Police Personnel | On call Basis | From respective police station of Jurisdiction. | - | |
| 6. | Medical Assistance(Nurses) | | From respective Hospital of the Jurisdiction | - | |
| 7. | Multipurpose cleaner/Security | Service Contract | Literate with experience of working as a helper | 02 | 30000/- (15000*2) |
| | **Total** | | | **08** | **2,00,000/-** |

**ಷರತ್ತುಗಳು:-**

1. Existing "Gelathi" Staff shall be subsumed within the 240 posts for One Stop Centres. AD (Administrative Department) shall also take a call at its level to remove existing staff of Gelathi and appoint more qualified staff for One Stop Centres.

2. Gelathi Scheme shall be discontinued with immediate effect as there cannot be 2 Schemes/duplicity of personnel serving the same purpose.
3. The new "One Stop Centres" shall be run within allocation of funds made by Government of India.
4. Of the 240 personnel approved, AD(Administrative Department) at its level shall redistribute posts as per cases reported in various Districts.
5. There shall be no financial liability on State Government either for the man power or administrative costs
6. Police personnel and medical assistance (nurses) shall be only on on-call and no posts for this purpose are being allowed.
7. Para-Legal Personnel/Lawyers shall be taken on consolidated pay by AD(Administrative Department) with requisite qualification (preferably women). If necessary AD(Administrative Department) shall consider requesting the Deputy Commissioner/C.E.O, Z.P/S.P. and District Judge to suggest the paralegal personnel.

ಮುಂದುವರೆದು, ಸದರಿ ಹುದ್ದೆಗಳಿಗೆ ನಿಗದಿ ಪಡಿಸಿರುವ **ವಿದ್ಯಾರ್ಹತೆ ಮತ್ತು ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿಗಳನ್ನು** ಗೌರವಧನದ ಆಧಾರದಲ್ಲಿ "ಒನ್ ಸ್ಟಾಪ್ ಸೆಂಟರ್" ಯೋಜನೆಯ ಮಾರ್ಗಸೂಚಿಯಲ್ಲಿ ನಮೂದಿಸಿರುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಟಾಸ್ಕ್‌ಫೋರ್ಸ್ ಸಮಿತಿಯ ಅನುಮೋದನೆ ಪಡೆದು ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಲು ಮತ್ತು ಮೇಲ್ಕಂಡ ಷರತ್ತುಗಳನ್ನು ಪಾಲಿಸಲು ಸೂಚಿಸಿದೆ.

ಎಲ್ಲಾ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ "ಗೆಳತಿ" ಯೋಜನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಗಿತಗೊಳಿಸಲು ಸೂಚಿಸಿದೆ ಹಾಗೂ "ಒನ್ ಸ್ಟಾಪ್ ಸೆಂಟರ್" ಯೋಜನೆಯಡಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ಯೋಜನೆಯ ಮಾರ್ಗಸೂಚಿಯನ್ವಯ ನಿಯಮಾನುಸಾರ ವೆಚ್ಚ ಭರಿಸಿ ಜಿ.ಎಫ್.ಆರ್ 12ಸಿ ನಮೂನೆಯಲ್ಲಿ ಉಪಯೋಗತ ಪ್ರಮಾಣಪತ್ರವನ್ನು ಒ.ಎಸ್.ಸಿ ಡ್ಯಾಷ್ ಬೋರ್ಡ್‌ನಲ್ಲಿ ದಾಖಲಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಸಹ ಕ್ರಮವಹಿಸಲು ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ. ಆಇ 393 ವೆಚ್ಚ-10/2019 ದಿನಾಂಕ:25.09.2019ರಲ್ಲಿನ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. Rajanna

(ಎಂ ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯದೇಗುಲ ಬಿಲ್ಡಿಂಗ್, 1ನೇ ಮಹಡಿ, ಹೆಚ್.ಸಿದ್ಧಯ್ಯ ರಸ್ತೆ, ಬೆಂಗಳೂರು-27.
7. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು
8. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆನಂದ್ ರಾವ್ ಸರ್ಕಲ್, ಬೆಂಗಳೂರು.
9. ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೃಪತುಂಗ ರಸ್ತೆ, ಬೆಂಗಳೂರು.
10. ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು.
11. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
12. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
13. ಎಲ್ಲಾ ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಎಸ್.ಪಿ). **ಸೂಕ್ತ ಕ್ರಮಕ್ಕಾಗಿ**
14. ಎಲ್ಲಾ ಜಿಲ್ಲೆಗಳ ಡಿಸ್ಟ್ರಿಕ್ಟ್ ಸರ್ಜನ್/ಜಿಲ್ಲಾ ಆರೋಗ್ಯ ಅಧಿಕಾರಿಗಳು (ಡಿ.ಹೆಚ್.ಓ), **ಸೂಕ್ತ ಕ್ರಮಕ್ಕಾಗಿ.**
15. ಎಲ್ಲಾ ಜಿಲ್ಲೆಗಳ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ. **ಸೂಕ್ತ ಕ್ರಮಕ್ಕಾಗಿ.**
16. ನಿರ್ದೇಶಕರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
17. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
18. ಖಜಾನೆ ಉಪನಿರ್ದೇಶಕರು, ಎನ್.ಎಂ.ಸಿ, ಖನಿಜಭವನ, ಬೆಂಗಳೂರು.
19. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

**(ಕ್ರ.ಸಂ. 11 ರಿಂದ 17 ನಿರ್ದೇಶನಾಲಯದ ಮುಖಾಂತರ)**

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತಕಾರ್ಯದರ್ಶಿ, ಬೆಂಗಳೂರು